ದಿನಾಂಕಃ **04/09/2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –**

14. ಪೊಲೀಸರು ಧ್ವನಿಯನ್ನು ಆಲಿಸಿ ಸಿ.ಡಿ. ತಯಾರಿಸಿದರು. ಸದರಿ ಧ್ವನಿಯನ್ನು ಆಲಿಸಿದರೆ ಗುರುತಿಸಬಲ್ಲೆ. (ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ಒಂದು ಸೀಲ್ಡ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ಸಿ.ಡಿ.ಯನ್ನು ಮುಮಾ-12 ಎಂದು ಗುರುತಿಸಿ, ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ಧ್ವನಿಯನ್ನು ಆಲಿಸಲಾಯಿತು. ಸಾಕ್ಷಿಯು ಧ್ವನಿ ಆಲಿಸಿ ವಿಶೇಷವಾಗಿ ನಿಪಿ-2 ರ ಪುಟ ಸಂಖ್ಯೆ 5 ರಲ್ಲಿ ಕಂಡುಬರುವ 'ಏನಂದಿ', '5,000/-' ಎನ್ನುವ ಶಬ್ದವನ್ನು ಕೇಳಿದ ನಂತರ ಧ್ವನಿ ಚಾಸಾ-5, ಆರೋಪಿ ಮತ್ತು ತನ್ನದು ಎಂದು ಗುರುತಿಸಿರುತ್ತಾರೆ.) ಈಗ ಕೇಳಿದ ಸಂಭಾಷಣೆಯಲ್ಲಿ ನಾನು, ಚಾಸಾ-5 ಮತ್ತು ಆರೋಪಿ ಮಾತನಾಡಿದ್ದು ಇರುತ್ತದೆ.

15. (ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ಒಂದು ಸೀಲ್ಡ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ಸಿ.ಡಿ.ಯನ್ನು ಮುಮಾ-13 ಎಂದು ಗುರುತಿಸಿ, ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ಧ್ವನಿಯನ್ನು ಆಲಿಸಲಾಯಿತು. ಸಾಕ್ಷಿಯು ಧ್ವನಿ ಆಲಿಸಿ ಧ್ವನಿ ಚಾಸಾ-5, 1 ಮತ್ತು 2 ನೇ ಆರೋಪಿ ಹಾಗೂ ತನ್ನದು ಎಂದು ಗುರುತಿಸಿರುತ್ತಾರೆ.) ಈಗ ಕೇಳಿದ ಸಂಭಾಷಣೆಯಲ್ಲಿ ನಾನು, ಚಾಸಾ-5 ಮತ್ತು 1 ಹಾಗೂ 2 ನೇ ಆರೋಪಿ ಮಾತನಾಡಿದ್ದು ಇರುತ್ತದೆ. (ಕೇಳಲಾದ ಸಂಭಾಷಣೆ ಯಾವುದೇ ಪಂಚನಾಮೆಯಲ್ಲಿ ನಮೂದು ಮಾಡಿದ ಸಂಭಾಷಣೆಗೆ ಹೊಂದಾಣಿಕೆ ಆಗುತ್ತದೆ ಎಂದು ಸಾಕ್ಷಿ ಗುರುತಿಸಿರುವುದಿಲ್ಲ.)

16. ದಾಳಿಗೆ ಮುಂಚೆ ಪೊಲೀಸರು ಕೊಟ್ಟ ರೆಕಾರ್ಡರನಲ್ಲಿ ನಾನು ಮುದ್ರಿಸಿಕೊಂಡ ಧ್ವನಿಯನ್ನು ಗುರುತಿಸಬಲ್ಲೆ. (ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ಒಂದು ಸೀಲ್ಡ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರಲ್ಲಿರುವ ಸಿ.ಡಿ.ಯನ್ನು ಮುಮಾ-14 ಎಂದು ಗುರುತಿಸಿ, ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ಧ್ವನಿಯನ್ನು ಆಲಿಸಲಾಯಿತು. ಸಾಕ್ಷಿಯು ಧ್ವನಿ ಆಲಿಸಿ ಧ್ವನಿ ಚಾಸಾ-5, 1 ನೇ ಆರೋಪಿ ಹಾಗೂ ತನ್ನದು ಎಂದು ಗುರುತಿಸಿರುತ್ತಾರೆ.) ಈಗ ಕೇಳಿದ ಸಂಭಾಷಣೆಯಲ್ಲಿ ನಾನು, ಚಾಸಾ-5 ಮತ್ತು 1 ನೇ ಆರೋಪಿ ಮಾತನಾಡಿದ್ದು ಇರುತ್ತದೆ. (ಕೇಳಲಾದ ಸಂಭಾಷಣೆ ಯಾವುದೇ ಪಂಚನಾಮೆಯಲ್ಲಿ ನಮೂದು ಮಾಡಿದ ಸಂಭಾಷಣೆಗೆ ಹೊಂದಾಣಿಕೆ ಆಗುತ್ತದೆ ಎಂದು ಸಾಕ್ಷಿ ಗುರುತಿಸಿರುವುದಿಲ್ಲ.)

17. ಪೊಲೀಸರು ಪಡೆದ ನನ್ನ, ಚಾಸಾ-5, 6 ಹಾಗೂ 1 ಮತ್ತು 2 ನೇ ಆರೋಪಿತರ ಮಾದರಿ ಧ್ವನಿಯನ್ನು ಗುರುತಿಸಬಲ್ಲೆ. (ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ನಾಲ್ಕು ಸೀಲ್ಡ್ ಕವರಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅವುಗಳಲ್ಲಿರುವ ಸಿ.ಡಿ.ಗಳನ್ನು ಮುಮಾ-15 ರಿಂದ 19 ಎಂದು ಗುರುತಿಸಿ, ವಿಶೇಷ ಅಭಿಯೋಜಕರು ತರಿಸಲಾದ ಲ್ಯಾಪಟ್ಯಾಪನಲ್ಲಿ ಅಳವಡಿಸಿ ಧ್ವನಿಯನ್ನು ಆಲಿಸಲಾಯಿತು. ಸಾಕ್ಷಿಯು ಮುಮಾ-15 ರಲ್ಲಿ 1 ನೇ ಆರೋಪಿ, ಮುಮಾ-16 ರಲ್ಲಿ ಚಾಸಾ-5 ಸುಭಾಸಚಂದ್ರಗೌಡ, ಮುಮ-17 ರಲ್ಲಿ ತನ್ನ, ಮುಮಾ-18 ರಲ್ಲಿ ಚಾಸಾ-6 ಮರಿಯಪ್ಪರ ಮಾದರಿ ಧ್ವನಿ ಇದ್ದು ಹಾಗೂ ಮುಮಾ-19 ರಲ್ಲಿ ಯಾವುದೇ ಧ್ವನಿ ಇರುವುದಿಲ್ಲ ಎಂದು ಗುರುತಿಸಿರುತ್ತಾರೆ.) ಈಗ ಕೇಳಿದ ಸಂಭಾಷಣೆಯಲ್ಲಿ ನನ್ನ, ಚಾಸಾ-5, 6 ಹಾಗೂ 1 ನೇ ಆರೋಪಿತರ ಮಾದರಿ ಧ್ವನಿ ಇರುತ್ತವೆ.

**ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಪಿ.ಎನ್.ಎ. ವಕೀಲರಿಂದಃ-**

(ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.